ದೆಹಲಿ, ಮುಂಬಯಿಗಳಲ್ಲಿ ನಡೆದ ವಚನ ಸಾಹಿತ್ಯ ಸಂಗೀತ ಸಮ್ಮೇಳನಗಳಲ್ಲೂ ಭಾಗವಹಿಸಿದ್ದೆ. ಈ ನೃತ್ಯ ಪ್ರಕಾರ ಹೆಚ್ಚು ಜನರನ್ನು ತಲುಪಲು, ಜೀವನದ ಆದರ್ಶಗಳನ್ನು ತಲುಪಿಸಲು ನೃತ್ಯ ಬಹಳ ಸಹಕಾರಿಯಾಯಿತು'.

'ಮಕ್ಕಳು ಸಂಗೀತ ನೃತ್ಯದಲ್ಲಿ ತೊಡಗಿಕೊಳ್ಳಬೇಕು ಎಂಬುದು ಸಾಮಾನ್ಯವಾಗಿ ಪೋಷಕರ ಅಭಿಲಾಷೆಯಾಗಿರುತ್ತದೆ. ನನ್ನ ಬದುಕಿನಲ್ಲೂ ನಡೆದದ್ದು ಇದೇ. ಚಿಕ್ಕಂದಿನಿಂದಲೇ ನಾನು ನೃತ್ಯ ಮಾಡಬೇಕು ಎನ್ನುವುದು ನನ್ನ ತಾಯಿಯ ಬಯಕೆ ಆಗಿತ್ತು. ತುಂಬ ಪ್ರೋತ್ಸಾಹವನ್ನೂ ಕೊಡ್ತಿದ್ರು. ಭರತನಾಟ್ಯ ಮಾಡ್ತೇನೆ ಅಂತ ಶಾಲೆಯಲ್ಲಿ ಎಲ್ಲರಿಗೂ ನನ್ನ ಮೇಲೆ ವಿಶೇಷ ಅಕ್ಕರೆ. ಭರತನಾಟ್ಯವನ್ನು ಗುರು ಶ್ರೀನಿವಾಸ್ ಅವರ ಬಳಿ ಕಲಿತೆ. ಪಿಯುಸಿ ಆದ ಮೇಲೆ ಮಾಯಾರಾವ್ ಅವರ ಬಳಿ ಕಥಕ್ ಕಲಿತೆ. 1988ರಲ್ಲಿ ಲಂಡನ್‌ನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದಲ್ಲಿ ಕರ್ನಾಟಕ ಸರ್ಕಾರದ ಪ್ರತಿನಿಧಿಯಾಗಿ ಭಾಗವಹಿಸಿ ನೃತ್ಯ ಕಾರ್ಯಕ್ರಮ ನೀಡಿದ್ದೆ. ಅದೂ 'ಕನ್ನಡ ಕೃತಿಗಳ ಭರತನಾಟ್ಯ ಸಂಜೆ', ಇದಕ್ಕೆ ಬಹಳ ಒಳ್ಳೆಯ ಪ್ರತಿಕ್ರಿಯೆಯೂ ಬಂತು. ಇದೇ ವರ್ಷ ರಾಜ್ಯ ಸರ್ಕಾರದ ವತಿಯಿಂದ ನಡೆದ ನೃತ್ಯ ಸ್ಪರ್ಧೆಯ ಸೋಲೊ ವಿಭಾಗದಲ್ಲಿ ನನಗೆ ಗೋಲ್ಡ್ ಮೆಡಲ್ ಕೂಡ ಬಂತು'

ಶುಭಾ ಈ ವಿಚಾರಗಳನ್ನು ಹಂಚಿಕೊಳ್ಳುತ್ತಾ ಪುಳಕಗೊಳ್ಳುತ್ತಾರೆ. ಜೊತೆಗೆ ಇನ್ನೂ ರೋಚಕ ಅನುಭವಗಳನ್ನು ನೆನಪಿನ ಬುತ್ತಿಯಿಂದ ಮೊಗೆದು ತೆಗೆಯುತ್ತಾರೆ.

## ನೃತ್ಯದ ಶಕ್ತಿ...

'ನೃತ್ಯಕ್ಕೆ ಎಷ್ಟು ಶಕ್ತಿ ಇದೆ ಎಂದರೆ ನನ್ನ ಜೀವನದಲ್ಲಾದ ಘಟನೆಯೊಂದು ನೆನಪಿಗೆ ಬರುತ್ತಿದೆ. ಇದು 1991ರ ಇಸವಿ. ಚೆನ್ನೈಯಲ್ಲಿ 'ಮದ್ರಾಸ್ ಮ್ಯೂಸಿಕ್ ಅಕಾಡೆಮಿ' ನಡೆಸಿದ ನೃತ್ಯ ಕಛೇರಿ. ಇದರಲ್ಲಿ ಭಾಗವಹಿಸಲು ಚೆನ್ನೈಗೆ ಹೋದೆ. ಅಲ್ಲಿ ಹೋಗಿ ರೈಲು ಇಳಿಯುವಾಗ ತುಂಬ ತಲೆನೋವು ಬಂತು. ತಡೆದುಕೊಳ್ಳಲು ಸಾಧ್ಯವೇ ಇಲ್ಲವೆಂದಾಗ ಆಸ್ಪತ್ರೆಗೆ ಹೋಗಿ ಅಡ್ಮಿಟ್ ಆಗಬೇಕಾಯಿತು. ಡ್ರಿಪ್ಸ್ ಹಾಕಿಸಿ ಔಷಧಿ ಎಲ್ಲ ತೆಗೆದುಕೊಂಡ ಬಳಿಕ ಸ್ವಲ್ಪ ಸುಧಾರಿಸಿತು. ಆಮೇಲೆ ರಿಹರ್ಸಲ್ ಇರುವ ಜಾಗಕ್ಕೆ ಹೋದೆ. ಪೇಲವವಾಗಿದ್ದ ನನ್ನ ಮುಖವನ್ನು ನೋಡಿ ಅಲ್ಲಿದ್ದ ಹಾಡುಗಾರರು, ವಾದ್ಯಸಂಗೀತ ಕಲಾವಿದರು, ಮೇಕಪ್‌ನವರು 'ಇವಳು ಡಾನ್ಸರ್ ಅಂತೆ, ಹೇಗೆ ಡಾನ್ಸ್ ಮಾಡ್ತಾಳೋ, ಮುಖ್ಯವಾದ ಸ್ಲಾಟ್ ಬೇರೆ ಕೊಟ್ಟಿದ್ದಾರೆ ಈಕೆಗೆ' ಎಂದು ಕೇವಲವಾಗಿ ಮಾತನಾಡುತ್ತಿರುವುದು ನನ್ನ ಕಿವಿಗೆ ಬಿತ್ತು. ಈ ಮಾತುಗಳನ್ನು ಲೆಕ್ಕಕ್ಕೇ ತೆಗೆದುಕೊಳ್ಳದೆ ನಾನು ನೃತ್ಯದತ್ತಲೇ ಗಮನಹರಿಸಿದ್ದೆ. ನನ್ನ ನೃತ್ಯ ಪ್ರದರ್ಶನ ಆರಂಭವಾಯ್ತು. ಪ್ರತಿ ಐಟಂಗೂ ಚಪ್ಪಾಳೆಯ ಸುರಿಮಳೆ ಬಂತು. ನೃತ್ಯದ ಶಕ್ತಿ ಏನೆಂಬುದು ಎಲ್ಲರಿಗೂ ಅರ್ಥವಾಗಿ ಹೋಗಿತ್ತು. ಕಾರ್ಯಕ್ರಮ ಮುಗಿದ ಕೂಡಲೇ ನನ್ನನ್ನು ಮೊದಲು ಆಡಿಕೊಂಡಿದ್ದ ಹಾಡುಗಾರರು, ವಾದ್ಯ ಸಂಗೀತದವರು ಎಲ್ಲರೂ ಬಂದು ನನ್ನನ್ನು ತಬ್ಬಿಕೊಂಡರು, ಅಭಿನಂದಿಸಿದರು, ಕೇವಲವಾಗಿ ಕಂಡವರೆಲ್ಲ ಬಂದು ಕೊಂಡಾಡಿದ್ದು ನನಗೆ ಬಹಳ ಖುಷಿಕೊಡ್ತು. ಈ ಘಟನೆ ನನ್ನ ಮನಸ್ಸಿನಲ್ಲಿ ಹಾಗೇ ಹಚ್ಚಹಸುರಾಗಿ ಉಳಿದಿದೆ.



## ಬೆಳ್ಳಿಗೆಜ್ಜೆ; ನೆನಪಿನ ಹೆಜ್ಜೆ

ತಂಜಾವೂರು ಶೈಲಿಯಲ್ಲಿ ಭರತನಾಟ್ಯವನ್ನು ಗುರು ಎಸ್.ವಿ. ಶ್ರೀನಿವಾಸ್ ಅವರಿಂದ ಹಾಗೂ ಕಥಕ್ ನೃತ್ಯವನ್ನು ಮಾಯಾರಾವ್ ಅವರ ಬಳಿ ಕಲಿತವರು. ದೇಶ ವಿದೇಶಗಳಲ್ಲಿ ನೃತ್ಯ ಪ್ರದರ್ಶನ, ಪ್ರಾತ್ಯಕ್ಷಿಕೆಗಳನ್ನು ನೀಡುತ್ತಾ ಬಂದವರು. ಅಮೆರಿಕ, ಇಂಗ್ಲೆಂಡ್, ಮಾಲ್ಡೀವ್ಸ್, ಅರಬ್ ದೇಶಗಳು, ನೇಪಾಳ, ಚೀನಾ, ಇಂಡೋನೇಷ್ಯಾ ಮುಂತಾದ ಕಡೆಗಳಲ್ಲಿ ನೃತ್ಯ ಕಾರ್ಯಕ್ರಮ ನಡೆಸಿಕೊಟ್ಟವರು. ಅಮೆರಿಕದಲ್ಲಿ 2020ರಲ್ಲಿ ನಡೆದ ಅಕ್ಕ ಸಮ್ಮೇಳನದಲ್ಲಿ, ಚೀನಾದ ಜಿನಾನ್‌ನಲ್ಲಿ ನಡೆದ ಅಂತರರಾಷ್ಟ್ರೀಯ ನೃತ್ಯ ಕಾರ್ಯಕ್ರಮದಲ್ಲಿ ಭಾಗವಹಿಸಿದ ಅಗ್ಗಳಿಕೆ ಇವರದು.

2004ರಲ್ಲಿ ಶುಭಾ ಅವರ 25 ವರ್ಷಗಳ ನೃತ್ಯ ಜೀವನಕ್ಕೆ ಸಂಬಂಧಿಸಿದ 'ಬೆಳ್ಳಿಗೆಜ್ಜೆ' ರಾಷ್ಟ್ರೀಯ ನೃತ್ಯೋತ್ಸವದಲ್ಲಿ ಅತ್ಯುತ್ತಮ ಕಾರ್ಯಕ್ರಮ ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. ನಾಟ್ಯರಾಣಿ ಶಾಂತಲಾ ಪ್ರಶಸ್ತಿ, ನೃತ್ಯ ಸರಸ್ವತಿ, ಕೆನಡಾದ ಮಾಂಟ್ರಿಯಲ್ ವಿವಿಯಿಂದ ಫೆಲೊಶಿಪ್, ಕೆಂಪೇಗೌಡ ಪ್ರಶಸ್ತಿ, ಕರ್ನಾಟಕ ಜ್ಯೋತಿ, ಪುಟ್ಟರಾಜ ಗವಾಯಿ ರಾಷ್ಟ್ರೀಯ ಯುವ ಪುರಸ್ಕಾರ, ನರ್ತನ ನಿಪುಣ ಬಿರುದು ಮುಂತಾದವು ಇವರ ಮುಡಿಗೆ ಸೇರಿವೆ. 'ಶುಭಾ ಧನಂಜಯ ನಾಟ್ಯಾಂತರಂಗ' ಇವರ ನೃತ್ಯ ಸಂಸ್ಥೆ. ನೂರಾರು ವಿದ್ಯಾರ್ಥಿಗಳಿಗೆ ಭರತನಾಟ್ಯ ಕಲಿಸಿದ ಶ್ರಮ ಇವರ ಬೆನ್ನಿಗಿದೆ.

ಪ್ರತಿಕ್ರಿಯಿಸಿ:
feedback@sudha.co.in

### ಕಲೆ ಮುಂದಿನ ಪೀಳಿಗೆಗೆ...

ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷೆ ಆಗುವ ಮೂಲಕ ಇದೀಗ ಹೊಸ ಜವಾಬ್ದಾರಿ. ಇದರ ವ್ಯಾಪ್ತಿ ಬಹಳ ವಿಸ್ತಾರವಾದುದು. ಇಲ್ಲಿ ಭರತನಾಟ್ಯ, ಕಥಕ್ ಮುಂತಾದ ನೃತ್ಯಪ್ರಕಾರಗಳಲ್ಲದೆ ಕರ್ನಾಟಕ–ಹಿಂದೂಸ್ತಾನಿ ಸಂಗೀತ, ಗಮಕ, ಹರಿಕಥೆ ಎಲ್ಲವೂ ಇದೇ ಅಕಾಡೆಮಿಗೆ ಸೇರಿದ್ದು. ಹೀಗಾಗಿ ಎಲ್ಲ ಮಿತಿಗಳನ್ನು ಮೀರಿ, ಹಂತಹಂತವಾಗಿ ಎಲ್ಲ ಕಲಾವಿದರನ್ನು ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳಬೇಕಾಗಿದೆ.

ಸದ್ಯಕ್ಕೆ ಯುವ ಪ್ರತಿಭಾನ್ವಿತ ಸಂಗೀತ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡುವ ಬಗ್ಗೆ ಅರ್ಜಿ ಆಹ್ವಾನಿಸಲಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 'ಸಂಗೀತ ನೃತ್ಯೋತ್ಸವ' ನಡೆಸಿ ಕಲಾವಿದರಿಗೆ ವೇದಿಕೆಯ ಅವಕಾಶ ನೀಡಲಾಗುತ್ತದೆ. ತುಮಕೂರಿನಿಂದ ಇದನ್ನು ಆರಂಭಿಸಿ ಹಂತ ಹಂತವಾಗಿ ಅಕಾಡೆಮಿ ವತಿಯಿಂದ ಕಾರ್ಯಕ್ರಮ ನಡೆಸಲಾಗುತ್ತದೆ. ಇಲ್ಲಿ ಸಂಗೀತ, ನೃತ್ಯ, ಹರಿಕಥೆ, ಗಮಕ ಎಲ್ಲದಕ್ಕೂ ಅವಕಾಶ ನೀಡುತ್ತೇವೆ.

ನಮ್ಮ ಕಲೆಯನ್ನು ಮುಂದಿನ ಪೀಳಿಗೆಗೂ ಉಳಿಸುವ ಸಲುವಾಗಿ ಸಂಗೀತ, ನೃತ್ಯದ ಕುರಿತ ಕಾರ್ಯಾಗಾರ, ಶಿಬಿರ, ಸಾಕ್ಷ್ಯಚಿತ್ರಗಳನ್ನು ದಾಖಲೀಕರಣ ಮಾಡಿಕೊಳ್ಳಲು ನಿರ್ಧರಿಸಲಾಗಿದೆ.